ಹೊರಗೆ ನೋಡಿದ. ಮಿಂಚಿನ ಬೆಳಕಿನಲ್ಲಿ ಮರಗಳು ಗಾಳಿಗೆ ಜೋರಾಗಿ ಓಲಾಡುತ್ತಿದ್ದುದು ಕಂಡಿತು. ಯಾವೊ ಹಾಸಿಗೆಗೆ ಮರಳಿ ಉದ್ವೇಗದಲ್ಲಿಯೇ ಮಲಗಿದ. ಮತ್ತೆ ಎಚ್ಚರಾಗಿ ಅವನ ಹೆಂಡತಿಯೊಡನೆ ತಾನು ಪಿಯಾನೊದ ನಾದ ಕೇಳಿದೆನೆಂದು ಹೇಳಿದ.

'ಹಿಂದೆಂದೂ ಕೇಳದ ರಾಗಗಳನ್ನೆಲ್ಲ ಅದರಿಂದ ಕೇಳಿದೆ. ಬೇರೆ ಬೇರೆ ಕೈಗಳು... ಅಜ್ಜಿಯ ಕೈಗಳು, ಅಮ್ಮನ ಕೈಗಳು, ನಿನ್ನ ಕೈಗಳು, ಅತ್ತೆಯ ಕೈಗಳು, ಸಾರಾನ ಕೈಗಳು, ಇಪ್ಪತ್ತಕ್ಕೂ ಹೆಚ್ಚಿನ ನೂರು ಬೆರಳುಗಳು ಅದರ ಕೀಲಿಗಳನ್ನು ಒತ್ತುತ್ತಿದ್ದವು. ಅಂಥ ಆಪ್ಯಾಯಮಾನ ಸಂಗೀತವನ್ನು ನಾನು ಕೇಳಿರಲೇ ಇಲ್ಲ. ರೊಸಾಲಿಯ, ಅದು ಲೋಕೋತ್ತರವಾದ ಸಂಗೀತ. ಕೆಲವೊಮ್ಮೆ ಸತ್ತುಹೋದ ಬೆರಳುಗಳು ಜೀವಂತ ಬೆರಳುಗಳಿಗಿಂತ ಚೆನ್ನಾಗಿ ಸಂಗೀತ ನುಡಿಸುತ್ತವೆ. ಹಿಂದಿನ ತಲೆಮಾರಿನ ಹುಡುಗಿಯರೆಲ್ಲ ಅದರ ಸುತ್ತ ಆ ಸಂಗೀತ ಕೇಳುತ್ತಾ ನಿಂತಿದ್ದರು. ಮತ್ತೆ, ಮದುವೆಯಾದ ವಧೂವರರು ಪರಸ್ಪರ ಕೈ ಹಿಡಿದು ಪಕ್ಕದಲ್ಲಿಯೇ ಕೂತಿದ್ದರು. ಯಾಕೆಂದು ತಿಳಿಯದು, ತುಸು ಹೊತ್ತಿನ ಬಳಿಕ ಎಲ್ಲರೂ ನನ್ನನ್ನು ಜಿಗುಪ್ಸೆಯಿಂದ ನೋಡಿದರು. ಇದ್ದಕ್ಕಿದ್ದಂತೆ ಪಿಯಾನೊದಿಂದ ಕೈ ಸರಿಯಿತು. ಆದರೆ, ಅದರಿಂದ ಮತ್ತೂ ಸಂಗೀತ ಬರುತ್ತಲೇ ಇತ್ತು. ಶವಯಾತ್ರೆ. ಮತ್ತೆ, ತನ್ನಷ್ಟಕ್ಕೆ ಪಿಯಾನೊ ಮೌನವಾಯಿತು. ನೀರಿನ ಪ್ರವಾಹವೇ ಬಂತು... ಆ ಪ್ರವಾಹದಲ್ಲಿ ಪಿಯಾನೊ ತೇಲುತ್ತಾ ಹೋಯಿತು... ಸಮುದ್ರಕ್ಕೆ. ನಾನು ಅದರತ್ತ ಜೋರಾಗಿ ಕೂಗಿದೆ. ಆದರೆ, ನನ್ನ ಕೂಗು ಅದಕ್ಕೆ ಕೇಳಲೇ ಇಲ್ಲ. ಅದು ಅವಮಾನಗೊಂಡಿರಬೇಕು ರೊಸಾಲಿಯ, ತೇಲುತ್ತಲೇ ಹೋಯಿತು... ನಾನು ರಸ್ತೆಯಲ್ಲಿ ಒಬ್ಬನೇ ನಿಂತಿದ್ದೆ. ಅಳತೊಡಗಿದೆ...'

ಯಾವೊ ದೆ ಒಲಿವೈರಾ ಏದುಸಿರು ಬಿಡುತ್ತಿದ್ದ. ಆ ನಿಗೂಢವಾದ ಸಂಗೀತ ಅವನನ್ನು ಭಾವುಕನನ್ನಾಗಿ ಮಾಡಿತ್ತು. ಆತನಿಗೆ ವಿಚಿತ್ರವಾದ ಸಂತಾಪವೆನಿಸತೊಡಗಿತ್ತು.

ಮಳೆ ನಿಂತು ಬೆಳಗಾದಾಗ ಯಾವೊ ನೀಗ್ರೋ ಹುಡುಗರನ್ನು ಕಲೆ ಹಾಕಲು ಹೊರನಡೆದ. ಅವನಲ್ಲಿದ್ದುದು ಆದಷ್ಟು ಬೇಗ ಕೆಲಸ ಮುಗಿಸಿಬಿಡಬೇಕೆಂಬ ಧಾವಂತವೊಂದೇ.

ಗಾಳಿ ಇನ್ನೂ ಜೋರಾಗಿಯೇ ಬೀಸುತ್ತಲಿತ್ತು. ಸಮುದ್ರ ಹಿಂದಿನ ರಾತ್ರಿಯ ಬಿರುಗಾಳಿಯನ್ನು ಒಳಗಿಟ್ಟುಕೊಂಡು ಅರಗಿಸಿಕೊಳ್ಳಲು ಯತ್ನಿಸುತ್ತಿತ್ತು. ಹುಡುಗರೇನೋ ಬಂದರು. ಆದರೆ, ಹಿಂದಿನ ದಿನದಷ್ಟು ಸಂಖ್ಯೆಯಲ್ಲಿರಲಿಲ್ಲ. ಅವರ ನಡುವೆ ಕೆಲವು ಗಂಡಸರೂ ಇದ್ದರು. ದೊರಗು ಸ್ವರದಿಂದ ಯಾವೊ ದೆ ಒಲಿವೈರಾ ಅವರ ನಿಯಂತ್ರಣ ತೆಗೆದುಕೊಂಡ.

ದಡದ ಮರಳಿನ ಮೇಲೆ ಪಿಯಾನೊ ಇನ್ನಷ್ಟು ನಿಧಾನವಾಗಿ ಸಾಗಿತು. ಕೊನೆಗೂ ಸಮುದ್ರದ ಅಲೆಗಳ ನಾಲಗೆ ಅದಕ್ಕೆ ತಾಗಿ ಅವು ನೆಕ್ಕತೊಡಗಿದವು.

ಕೆಲವರು ದಡದ ಹಿಂದಿನ ಕಾಲುದಾರಿಯ ಮೇಲೆ ನಿಂತು ಈ ದೃಶ್ಯವನ್ನು ನೋಡಿದರು. ಒಲಿವೈರಾನ ಸೈನ್ಯ ಪಿಯಾನೊವನ್ನು ಎತ್ತಿ ಆದಷ್ಟು ಮುಂದೆ ನೂಕಿ ಸಮುದ್ರ ತನ್ನ ಗರ್ಭದಲ್ಲಿ ಎಳೆದುಕೊಳ್ಳುವುದಕ್ಕೆ ಅನುವು ಮಾಡಿಕೊಟ್ಟಿತು. ಎರಡು ದೊಡ್ಡ ಅಲೆಗಳು ಅದರ ಮೇಲೆ ಬಿದ್ದರೂ ಯಾವ ಪರಿಣಾಮವೂ ಆಗಲಿಲ್ಲ. ಮೂರನೆಯ ಅಲೆಗೆ ಅದು ತುಸು ಅಲುಗಾಡಿತು. ನಾಲ್ಕನೆಯದು ಅದನ್ನು ಶಾಶ್ವತವಾಗಿ ಒಳಗೆ ಸೆಳೆದುಕೊಂಡಿತು. ಯಾವೊ ದೆ ಒಲಿವೈರಾ ಬಾಯಿ ಬಿಟ್ಟು ಮೊಣಕಾಲಮಟ ನೀರಿನಲ್ಲಿ ನಿಂತಿದ್ದ. ಸಮುದ್ರ ಬಹಳ ಶಾಂತವಾಗಿ ಇದ್ದ ಹಾಗೆ ಕಾಣುತ್ತಿತ್ತು. ಅವನು ಅಳುತ್ತಿದ್ದ ಎಂದು ಯಾರೂ ಹೇಳುವ ಹಾಗಿರಲಿಲ್ಲ. ಯಾಕೆಂದರೆ ನೀರಿನ ತುಂತುರುಗಳು ಅವನ ಕಣ್ಣೀರನ್ನು ಮರೆ ಮಾಡಿದ್ದವು.

ದೂರದಲ್ಲಿ, ಸಾರಾ ಲೆಫ್ಟಿನೆಂಟನ ಹೆಗಲ ಮೇಲೆ ತಲೆ ಇಟ್ಟು ನಿಂತಿರುವುದು ಗೋಚರಿಸಿತು. ಅವಳ ಜೊತೆ ಡಾಲಿಯೂ ಇತ್ತು. ಅದರ ಮೂತಿ ಪ್ರಶ್ನಾರ್ಥಕವಾಗಿತ್ತಲ್ಲದೆ, ಅಲ್ಲಿ ಒಂದು ಹತಾಶೆಯೂ ಕಾಣುತ್ತಿತ್ತು. ಅದಕ್ಕೆ ಸದಾ ಪಿಯಾನೊದ ಬಳಿಯೇ ಮಲಗುವ ಅಭ್ಯಾಸ. ರೊಸಾಲಿಯ ಅಲ್ಲಿ ಇರದೆ ಇದ್ದುದು ಯಾವೊನಿಗೆ ನಿರಾಳವೆನಿಸಿತು. ಆಮೇಲೆ ಅನೇಕರು ಸಮುದ್ರ ದಡಕ್ಕೆ ಬಂದು ಏನಾಯಿತೆಂದು ವಿಚಾರಿಸಿದರು. ಮೊದಲಿಗೆ ಇಡಿಯ ಪೋಲಿಶ್ ಸಂಸಾರವೇ ಮುಳುಗಿತೆಂದು ಅನ್ನಿಸಿರಬೇಕು. ಆ ಮೇಲೆ ಯಾರೋ ಒಬ್ಬ ಮಾತ್ರ ಮುಳುಗಿರಬಹುದೆಂದು ಯೋಚಿಸಿದರು. ಯಾವುದೋ ಒಂದು ಚಿಕ್ಕ ಮಗು ಎಂದರು ಯಾರೋ. ಉಳಿದವರು ಅಲ್ಲ, ಭಗ್ನ